# ಮೈಸೂರು ಮಹಾನಗರ ಪಾಲಿಕೆ

ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ ಸಭೆಯ ನಡವಳಿ, ಮೈಸೂರು.

ಸಭೆಯ ದಿನಾಂಕ : 02-12-2009.

ಸಭೆಯ ವೇಳೆ : ಬೆಳಿಗ್ಗೆ 9.00 ಕ್ಕೆ

ಅಧ್ಯಕ್ಷತೆ : ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಅಧಿಕಾರಿಗಳು,

| ಕ್ರ. ಸಂ. | ಹಾಜರಿದ್ದವರು | ಕ್ರ ಸಂ. | ಹಾಜರಿದ್ದವರು |
|---|---|---|---|
| 1. | ಶ್ರೀ ಪುರುಷೋತ್ತಮ, ಮಾನ್ಯ ಮಹಾಪೌರರು, ಮೈನಪಾ | 19. | ಶ್ರೀ ಪದ್ಮನಾಭ್. ಡಿ, ಛೇರ್‌ಮೆನ್, ಜಿಲ್ಲಾ ಪ್ಲಾನಿಂಗ್ ಕಮಿಟಿ |
| 2. | ಶ್ರೀಮತಿ ಶಾರದಮ್ಮ, ಮಾನ್ಯ ಉಪ ಮಹಾಪೌರರು, ಮೈನಪಾ | 20. | ಶ್ರೀ ರಾಮಚಂದ್ರಯ್ಯ, ಸಕಾಇಂ, ಕೆ.ಯು.ಡಬ್ಲ್ಯೂ.ಎಸ್ & ಡಿಬಿ |
| 3. | ಶ್ರೀ ಕೆ.ಎಸ್. ರಾಯ್ಕರ್, ಆಯುಕ್ತರು, ಮೈನಪಾ | 21. | ಶ್ರೀ ಎ.ಎನ್.ಪ್ರಸಾದ್, ಸಕಾಇಂ, ಮೈನಪಾ |
| 4. | ಶ್ರೀ ಜಯಣ್ಣ, ಆಯುಕ್ತರು, ಮೂಡಾ | 22. | ಶ್ರೀ ಬಿ.ಎನ್. ರಾಮಕೃಷ್ಣ, ಸಕಾಇಂ, ಮೈನಪಾ |
| 5. | ಶ್ರೀ ಎಸ್.ಟಿ.ದೇವರಾಜು, ಉಪ ಆಯುಕ್ತರು, ಮೈನಪಾ | 23. | ಶ್ರೀ ಆರ. ನರಸಿಂಹಮೂರ್ತಿ, ಸಕಾಇಂ, ನರ್ಮ್ |
| 6. | ಶ್ರೀ ಬಿ.ಕೆ. ಸುರೇಶ್‌ಬಾಬು, ಅಇಂ, ನರ್ಮ್, ಮೈನಪಾ | 24. | ಶ್ರೀ ಎಂ.ಆರ್.ರಾಘವೇಂದ್ರ, ಸಕಾಇಂ, ನರ್ಮ್ |
| 7. | ಶ್ರೀ ಮಹೇಶ್, ಅಇಂ, ಮೈನಪಾ | 25. | ಶ್ರೀ ಎಂ. ಬಸವರಾಜು, ಸಕಾಇಂ, ನರ್ಮ್ |
| 8. | ಶ್ರೀ ಶಿವಕುಮಾರ್, ಅಇಂ, ಮೂಡಾ | 26. | ಶ್ರೀ ಹೆಚ್.ವಿ. ಶ್ರೀಧರ್‌ಮೂರ್ತಿ, ಸಕಾಇಂ, ನರ್ಮ್ |
| 9. | ಶ್ರೀ ಎಂ.ಎನ್. ಶ್ರೀನಿವಾಸ, ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ | 27. | ಶ್ರೀ ಎಂ.ವಿ. ಶ್ರೀಧರ್, ಸಕಾಇಂ, ನರ್ಮ್ |
| 10. | ಶ್ರೀ ಹೊನ್ನೇಗೌಡ, ಕಾಅ., ಕೆಯುಡಬ್ಲ್ಯೂಎಸ್ & ಡಿಬಿ | 28. | ಶ್ರೀ ಬಿ.ಸಿ. ಕುಮಾರ್, ಸಕಾಇಂ, ನರ್ಮ್, ಮೈನಪಾ |
| 11. | ಶ್ರೀ ಡಿ. ಬಿಳಿಗಿರಿರಂಗಸ್ವಾಮಿ, ಕಾಅ, ಕೆ.ಎಸ್.ಪಿ.ಬಿ | 29. | ಶ್ರೀ ಹೆಚ್. ಕಿಶೋರ್‌ಚಂದ್ರ, ಸಕಾಇಂ, ಮೂಡಾ |
| 12. | ಶ್ರೀ ಶ್ರೀ ದೇವರಾಜು, ನಗರಪಾಲಿಕೆ ಸದಸ್ಯರು ಹಾಗೂ ಆಡಳಿತ ಪಕ್ಷದ ನಾಯಕರು, ಮೈನಪಾ | 30. | ಶ್ರೀಮತಿ ಶೋಭಾಭಟ್, ಮಾನವ ಸಂಪನ್ಮೂಲ ಅಧಿಕಾರಿ, ನರ್ಮ್ |
| 13. | ಶ್ರೀ ಸಂದೇಶಸ್ವಾಮಿ, ನಗರಪಾಲಿಕೆ ಸದಸ್ಯರು, ಮೈನಪಾ | 31. | ಶ್ರೀ ಶರತ್ ಹೆಚ್.ಎಸ್, ಐ.ಟಿ. ಆಫಿಸರ್, ಜೆಎನ್‌ನರ್ಮ್ |
| 14. | ಶ್ರೀ ಆಯೂಬ್‌ಖಾನ್, ನಗರಪಾಲಿಕೆ ಸದಸ್ಯರು, ಮೈನಪಾ | 32. | ಶ್ರೀ ಚಿದಂಬರ್ ಬಿ.ಎಸ್, ಪಿ.ಹೆಚ್.ಇ, ನರ್ಮ್ |
| 15. | ಶ್ರೀ ದೇವರಾಜು, ನಗರಪಾಲಿಕೆ ಸದಸ್ಯರು, ಮೈನಪಾ | | ಶ್ರೀ ಶಿವಕುಮಾರ್, ಪಿಎಂ, ಮೆ॥ ಪ್ರತ್ಯೂಷ ಅಸೋಸಿಯೇಟ್ಸ್ |
| 16. | ಶ್ರೀ ಮಲ್ಲೇಶ್, ನಗರಪಾಲಿಕೆ ಸದಸ್ಯರು, ಮೈನಪಾ | 34. | ಶ್ರೀ ಆರ್.ಪಿ. ಅಗರ್‌ವಾಲ, ಜಿ.ಎಂ.ಮೆ॥ ಪ್ರತ್ಯೂಷ ಅಸೋಸಿಯೇಟ್ಸ್ |
| 17. | ಶ್ರೀ ಬಿ.ಎಲ್. ಭೈರಪ್ಪ, ನಗರಪಾಲಿಕೆ ಸದಸ್ಯರು, ಮೈನಪಾ | 35 | ಶ್ರೀ ಮಧುಕರ್ ಜಿ., ಪ್ರಾಜೆಕ್ಟ್ ಡೈರೆಕ್ಟರ್, ಮೈಸೂರು ಹೆರಿಟೇಜ್ ರೀವೈವಲ್ ಪ್ರಾಜೆಕ್ಟ್. |
| 18. | ಶ್ರೀ ಹೆಚ್.ಎನ್. ಶ್ರೀಕಂಠಯ್ಯ, ಶ್ರೀ ಎ.ಎನ್.ಪ್ರಸಾದ್, ಸಕಾಇಂ, ಮೈನಪಾ | 36 | |

ಹಿಂದಿನ ಸಭೆಯ ದಿನಾಂಕ : 18/11/09

ಮುಂದಿನ ಸಭೆಯ ದಿನಾಂಕ : 16/12/09

ಮುಂದಿನ ಸಭೆಯ ವೇಳೆ : ಬೆಳಿಗ್ಗೆ 9.00 ಗಂಟೆಗೆ

ಮುಂದಿನ ಸಭೆಯ ಸ್ಥಳ : ಎಂ.ಪಿ.ಸಿ ಸಭೆಯ ಸಭಾಂಗಣ, ಮೈಸೂರು

ತಯಾರಿಸಿದವರು : ಶ್ರೀ ಬಿ.ಕೆ. ಸುರೇಶ್‌ಬಾಬು

ಕಳುಹಿಸಿರುವುದು : ಶ್ರೀ ಬಿ.ಕೆ. ಸುರೇಶ್‌ಬಾಬು

ಟಿಪ್ಪಣಿ :

- ಎಲ್ಲರೂ ಸಭೆಯ ನಡವಳಿಯ ಪ್ರತಿಯನ್ನು ಮುಂದಿನ ಸಭೆಗೆ ತರಲು ಕೋರಲಾಗಿದೆ.
- ಸಭೆಯ ನಡವಳಿಕೆಗೆ ಪಾಲನಾ ವರದಿಯನ್ನು ಮುಂದಿನ ಸಭೆ ನಡೆಯುವ 2 ದಿವಸಗಳ ಮುಂಚಿತವಾಗಿ ಸಲ್ಲಿಸುವುದು.
- ಅನುಪಾಲನಾ ವರದಿಯನ್ನು ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮನ್ವಯಾಧಿಕಾರಿ, ನರ್ಮ್ ಯೋಜನೆ ಇವರಿಗೆ ಕಳುಹಿಸಿಕೊಟ್ಟು, ಈ ಅಧಿಕಾರಿಯು ವರದಿಯನ್ನು ಕ್ರೋಢಿಕರಿಸಿ, ಈ ಕೆಳಗೆ ಸಹಿ ಮಾಡಿರುವವರಿಗೆ ಒಂದು ದಿವಸ ಮುಂಚಿತವಾಗಿ ಪರಿಶೀಲನೆಗಾಗಿ ಮಂಡಿಸುವುದು.
- ನರ್ಮ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರಗಳನ್ನು ಮೈಸೂರು ನಗರಪಾಲಿಕೆಗೆ ಕಳುಹಿಸುವುದು.

* * * * *

ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರಪಾಲಿಕೆ (ಜೆ.ಎನ್.ಎನ್.ನರ್ಮ್), ಇವರು ಪೂಜ್ಯ ಮಹಾಪೌರರು, ಹಾಗೂ ಪೂಜ್ಯ ಉಪ ಮಹಾಪೌರರು, ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಅಧಿಕಾರಿಗಳು, ಆಯುಕ್ತರು ಮೈಸೂರು ಮಹಾನಗರ ಪಾಲಿಕೆ, ಆಯುಕ್ತರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮತ್ತು ನಗರಪಾಲಿಕೆ ಸದಸ್ಯರು, ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರು, ಮಾಧ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿದರು.

ಪ್ರಾರಂಭದಲ್ಲಿ, ಮುಂದಿನ ಸಭೆಯಿಂದ ಸಭೆಯಲ್ಲಿ ಭಾಗವಹಿಸುವ ಆಸಕ್ತಿಯುಳ್ಳ ಸಾರ್ವಜನಿಕರು/ಸಂಘಸಂಸ್ಥೆಗಳು ಅವರ ಪ್ರಶ್ನೆಗಳು/ ವಿಚಾರಣೆಗಳನ್ನು ಲಿಖಿತ ಮೂಲಕ ನೀಡುವಂತೆ ಮತ್ತು ಅವುಗಳನ್ನು ನಂತರದ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಬರವಣಿಗೆ ಮೂಲಕ ಉತ್ತರಿಸಲು ನಿರ್ಧರಿಸಲಾಯಿತು. ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 1 | ಮೈಸೂರು ನಗರದಲ್ಲಿ ನೀರು ಸರಬರಾಜು ನೆಟ್‌ವರ್ಕ್‌ನ ರೀಮಾಡಲ್ಲಿಂಗ್, ಸಿಸ್ಟಮ್ ಆಟೋಮೇಷನ್ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಒದಗಿಸುವ ಯೋಜನೆ: ಯೋಜನಾ ಅಂದಾಜು ಮೊತ್ತ ರೂ.65.56 ಕೋಟಿಗಳು<br>ಯೋಜನಾ ಮುಕ್ತಾಯ ದಿನಾಂಕ:ಜನವರಿ-2010 | ನವಂಬರ್ 15 2009ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 66.83 ಕೋಟಿಗಳ ಎದುರಾಗಿ ರೂ. 66.95 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಇವುಗಳಲ್ಲಿ 44.11 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 29.62 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು | ನವಂಬರ್ 2009ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 67.86 ಕೋಟಿಗಳ ಎದುರಾಗಿ ರೂ. 68.02 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಮತ್ತು 45.17 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿರುತ್ತದೆಯೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ನಡೆಸಲಾಗಿರುತ್ತದೆ.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 20.05 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 5.30 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು.<br>ಕಾರ್ಯಪಾಲಕ ಅಭಿಯಂತರರು, ಕೆ.ಯು.ಡಬ್ಲ್ಯೂಎಸ್&ಡಿಬಿ ರವರು ಮರಳಿನ ಕೊರತೆಯಿಂದ ಕಾಮಗಾರಿಯ ಪ್ರಗತಿಯು ಕುಂಠಿತಗೊಂಡಿರುತ್ತದೆಯೆಂದು ತಿಳಿಸಿದರು. ಆದರೆ ಕಾರ್ಯಪಾಲಕ ಅಭಿಯಂತರರು ರವರ ಈ ವಿವರಣೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ.<br>ಗುತ್ತಿಗೆದಾರರು ಅವಶ್ಯವಿರುವ ಮರಳನ್ನು ಸಂಗ್ರಹಿಸಲು ಸೂಕ್ತ ಕ್ರಮತೆಗೆದುಕೊಂಡು ಕಾಮಗಾರಿಯ ವೇಗವನ್ನು ಹೆಚ್ಚಿಸಲು ತಿಳಿಸಲಾಯಿತು. ಕಾರ್ಯಪಾಲಕ ಅಭಿಯಂತರರು ರವರು ಇದುವರೆಗೂ ಈ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಷೇಶಾಧಿಕಾರಿಗಳನ್ನು ಸಂಪರ್ಕಿಸಿರುವುದಿಲ್ಲವೆಂದು ತಿಳಿಸಿದರು.<br>ಒಟ್ಟಾರೆಯಾಗಿ ಮೆ॥ ನಾಗಾರ್ಜುನ ಕಂಪನಿಯವರ ಪ್ರಗತಿಯು ಸಮಾಧನಕರವಾಗಿರುವುದಿಲ್ಲ. ಕುಂಠಿತ ಪ್ರಗತಿಗೆ ಸಂಬಂಧಿಸಿದಂತೆ ಕಂಪನಿಗೆ ಹಲವಾರು ನೋಟಿಸ್‌ಗಳನ್ನು ನೀಡಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.<br>ನಾಗಾರ್ಜುನ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರನ್ನು ಮುಂದಿನ ಸಭೆಗೆ ಹಾಜರಾಗುವಂತೆ ಕೋರಲು ತಿಳಿಸಲಾಯಿತು. ಕಂಪನಿಯ ಯೋಜನಾ ನಿರ್ದೇಶಕರಿಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ತಿಳಿಸಲಾಯಿತು. | ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 30.83 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆಯೆಂದು ತಿಳಿಸಲಾಯಿತು.<br><br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 20.40 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 6.01 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br><br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು.<br><br>ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ಮುಂದಿನ ಸಭೆಯೊಳಗೆ ಆಕ್ಷನ್ ಪ್ಲಾನ್ ಅನ್ನು ಪರಿಷ್ಕರಿಸಿ ತಪ್ಪದೇ ಮಂಡಿಸಬೇಕೆಂದು ತಿಳಿಸಲಾಯಿತು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಯೋಜನೆಯನ್ನು ಮುಂಚಿತವಾಗಿ ಪೂರ್ಣಗೊಳಿಸಲು ಅನುಕೂಲವಾಗುವಂತೆ ಕಾರ್ಯಕ್ರಮ ಪಟ್ಟಿಯನ್ನು ಪರೀಕ್ಷಿಸುವಂತೆ ಮತ್ತು ಅದನ್ನು ಮುಂದಿನ ಸಭೆಯೊಳಗೆ ತಪ್ಪದೇ ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸೂಚಿಲಾಯಿತು. | | |
| **2.** | ಸ್ಕಾಡಾ ಯೋಜನೆ: ಅಂದಾಜು ಮೊತ್ತ: ರೂ. **5.24 ಕೋಟಿ**<br>Agency: M/s. Mechatronics<br>ಅವಧಿ: 9 ತಿಂಗಳು<br>ಮುಕ್ತಾಯ ವಾಗಬೇಕಾದುದು : ಜುಲೈ-2009 | – | ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ಈ ಬಗ್ಗೆ ಟ್ರಯಲ್ ರನ್ ಪ್ರಗತಿಯಲ್ಲಿದೆಯೆಂದು ತಿಳಿಸಿದರು. | |
| **3.** | **24 x 7** ನೀರು ಸರಬರಾಜು<br>ಪಶ್ಚಿಮ ವಲಯ: ಅಂದಾಜುಮೊತ್ತ **56.07** ಕೋಟಿ ರೂ. ಸಿಎಸ್ಆರ್, ಕುವೆಂಪುನಗರ ಹೆಚ್.ಎಲ್.ಆರ್ ವಲಯದ ಭಾಗಶ: ವಲಯಗಳು ಮತ್ತು ಪೂರ್ವವಲಯ ಹೆಚ್.ಎಲ್.ಆರ್ ವಲಯದ ಭಾಗಶ: ಅಂದಾಜುಮೊತ್ತ **45.84** ಕೋಟಿ ರೂ. ಜರ್ಮನ್ ಪ್ರೆಸ್, ದೇವನೂರು, ಬಳ್ಳಾಲ್ ವೃತ್ತ ವಲಯಗಳು ಮತ್ತು ಹೆಚ್.ಎಲ್.ಆರ್ ವಲಯದ ಭಾಗಶ:<br>ಮುಕ್ತಾಯವಾಗಬೇಕಾದುದು: Jan-2013 | ಜಸ್ಕೋ ಅಧಿಕಾರಿಗಳು ವಲಯ ಅಧಿಕಾರಿಗಳು ಮತ್ತು ನಗರಪಾಲಿಕೆಯ ಸದಸ್ಯರೊಂದಿಗೆ ಯಾವುದೇ ಸಭೆಗಳನ್ನು ನಡೆಸುತ್ತಿಲ್ಲವೆಂದು ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರು ತಿಳಿಸಿದರು.<br>ಇದಕ್ಕೆ ಉತ್ತರವಾಗಿ, ವಲಯವಾರು ಸಭೆಗಳನ್ನು ನಡೆಸಲು ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಲಾಗಿದ್ದು, ಅದರಂತೆ ಸಭೆಗಳನ್ನು ನಡೆಸಲಾಗುವುದೆಂದು ಜಸ್ಕೋ ಅಧಿಕಾರಿಗಳು ತಿಳಿಸಿದರು. | ಜಸ್ಕೋದವರು ಸಿ.ಐ.ಪಿ ಪ್ಲಾನ್ ಸಲ್ಲಿಸಿರುತ್ತಾರೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು ಜಸ್ಕೋದವರಿಂದ ಕೈಗೆತ್ತಿಕೊಳ್ಳಲಾಗಿರುವ 9 ಡಿ.ಎಂ.ಎಸ್‌ಗಳ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದರು.<br>ನಂತರ ಶ್ರೀ ಎ. ಘೋಷ್, ಚೀಫ್, ಜಸ್ಕೋ ಇವರು ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ಜೆ.ಪಿ.ನಗರದ ತೊಂದರೆಯನ್ನು ನಿವಾರಿಸಿರುವುದಾಗಿ ತಿಳಿಸಿದರು. ನೀರು ಸೋರುವಿಕೆಯನ್ನು ಗುರುತಿಸಿ ವಾಲ್ವ್‌ಗಳನ್ನು ಬದಲಾಯಿಸಿರುವುದಾಗಿ ತಿಳಿಸಿದರು. ನೀರು ಸರಬರಾಜು ಕೊಳವೆಯಲ್ಲಿ ಕೆಲವು ಕಿಡಿಗೇಡಿಗಳು ಮರದ ತುಂಡನ್ನು ಹಾಕಿ ನೀರು ಹರಿಯಲು ಅಡಚಣೆ ಉಂಟು ಮಾಡಿದ್ದಾರೆಂದು ಸಭೆಯ ಗಮನಕ್ಕೆ ತಂದರು.<br>ಮೊದಲ ಹಂತದಲ್ಲಿ ಜೆ.ಪಿ.ನಗರದ ಪ್ರದೇಶದಲ್ಲಿ 24/7 ನೀರು ಸರಬರಾಜು ಯೋಜನೆ ಅನುಷ್ಠಾನಗೊಳಿಸಲಾಗುವುದೆಂದು ಪಾಲಿಕೆ ಆಯುಕ್ತರು ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ಜಸ್ಕೋದವರು ಸಭೆಯನ್ನು ನಡೆಸುತ್ತಿಲ್ಲವೆಂದು ನಗರಪಾಲಿಕೆ ಸದಸ್ಯರು ತಿಳಿಸಿದರು.<br>ಜಸ್ಕೋ ವಿಚಾರಗಳ ಬಗ್ಗೆ ಚರ್ಚಿಸಲು ನಗರಪಾಲಿಕೆ ಎಲ್ಲಾ ಸದಸ್ಯರ ಜೊತೆಗೆ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಪ್ರತ್ಯೇಕ ಸಭೆಯನ್ನು ನಡೆಸಲು ತೀರ್ಮಾನಿಸಲಾಯಿತು. | |
| **4.** | **ಮೈಸೂರು ನಗರಕ್ಕೆ ಸಗಟು ನೀರು ಸರಬರಾಜನ್ನು ಕಬಿನಿ ನದಿಯಿಂದ ತರುವ ಯೋಜನೆ:**<br>**ಯೋಜನೆಯ ಅಂದಾಜು ರೂ. 108.81 ಕೋಟಿ**<br>ಮುಕ್ತಾಯವಾಗಬೇಕಾದುದು Jan-2012 | ಒಟ್ಟು ಏಳು ಕಾಮಗಾರಿಗಳಲ್ಲಿ ಈಗಾಗಲೇ ಮೂರು ಕಾಮಗಾರಿ ಪ್ರಾರಂಭಿಸಲಾಗಿದ್ದು, ಉಳಿದ ನಾಲ್ಕು ಕಾಮಗಾರಿಗಳ ಸ್ಥಳದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲು ರೈತರ ವಿರೋಧವಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.<br>ಈ ನಾಲ್ಕು ಸ್ಥಳಗಳಲ್ಲಿ ಪೋಲೀಸ್‌ರ ರಕ್ಷಣೆಯೊಂದಿಗೆ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ವಿಶೇಷಾಧಿಕಾರಿಗಳು ನರ್ಮ್ ಇವರು ಆದೇಶಿಸಿದರು ಮತ್ತು ಈ ಸಂಬಂಧ ಯಾವುದೇ ವಿಳಂಬ ಮಾಡಬಾರದಾಗಿ ತಿಳಿಸಿದರು. | ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ರೈತರು ಇವರ ಜಮೀನಿಗೆ ಪರಿಹಾರವನ್ನು ಪಾವತಿಸಿಲ್ಲದಿರುವುದರಿಂದ ಕೆಲಸ ಪ್ರಾರಂಭಿಸಲು ಅಡಚಣೆ ಉಂಟು ಮಾಡುತ್ತಿದ್ದಾರೆಂದು ತಿಳಿಸಿದರು.<br>ಉಪ ವಿಭಾಗಾಧಿಕಾರಿಗಳು ಇವರ ಕೋರಿಕೆ ಮೇರೆಗೆ ಈಗಾಗಲೇ ಭೂ ಸ್ವಾದೀನಕ್ಕಾಗಿ ರೂ **60** ಲಕ್ಷಗಳ ಠೇವಣಿ ಮಾಡಿರುವುದಾಗಿ ಪಾಲಿಕೆ ಆಯುಕ್ತರು ತಿಳಿಸಿದರು.<br>ಸಭೆಯಲ್ಲಿ ಹಾಜರಿದ್ದ ರೈತರ ಪ್ರತಿನಿಧಿಗಳು ಅವರ ಜಮೀನಿಗೆ ಸೂಕ್ತ ದರ ನಿಗಧಿಪಡಿಸಲು ಕೋರಿದರು. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು ಕಾನೂನಿನ ಪ್ರಕಾರ ಸೂಕ್ತ ದರ ನೀಡುವುದಾಗಿ ತಿಳಿಸಿದರು ಹಾಗೂ ಯೋಜನೆ ಕಾರ್ಯಗತಗೊಳಿಸಲು ತಮ್ಮ ಜಮೀನುಗಳನ್ನು ನೀಡುವಂತೆ ಕೋರಿದರು.<br>ದಿನಾಂಕ: **07.12.2009**ರಂದು ಮಧ್ಯಾಹ್ನ ಈ ಯೋಜನೆ ಅಡಿಯಲ್ಲಿ ಬರುವ ಎಲ್ಲಾ ಜಮೀನಿನ ಮಾಲೀಕರುಗಳ ಜೊತೆ ಸಭೆ ನಡೆಸಿ ವಿಷಯವನ್ನು ಇತ್ಯರ್ಥಗೊಳಿಸಲು ನಿರ್ಧರಿಸಲಾಯಿತು. ಸದರಿ ಸಭೆಗೆ ಸೂಕ್ತ ವ್ಯವಸ್ಥೆ ಮಾಡುವಂತೆ ಕಾರ್ಯಪಾಲಕ ಇಂಜಿನಿಯರ್, | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರಿಗೆ ಸೂಚಿಸಲಾಯಿತು. | |
| **5** | ಮೈಸೂರು ನಗರದ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು.<br>ಯೋಜನಾ ವೆಚ್ಚ: ರೂ **85.25** ಕೋಟಿಗಳು. ಗುತ್ತಿಗೆ ಪ್ರೀಮಿಯಂ: **17.50%** ಮೇಲ್ಪಟ್ಟು (ರೂ. **108.59** ಕೋಟಿ) ಗುತ್ತಿಗೆ ಅವಧಿ: ಮಾನ್ಸೂನ್ ಬಿಟ್ಟು **18** ತಿಂಗಳು (**3** ತಿಂಗಳು ಮಾನ್ಸೂನ್ ಕಾಲ)<br>ಮುಕ್ತಾಯವಾಗಬೇಕಾದುದು Jan-2010 | ಚಾಮುಂಡಿ ಬೆಟ್ಟದ ಬಸ್ ನಿಲ್ದಾಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ವಿಶೇಷಾಧಿಕಾರಿಗಳು ನರ್ಮ್ ಇವರು ಆದೇಶಿಸಿದರು.<br>ಕ.ರಾ.ರ.ಸ.ನಿ. ಸಂಸ್ಥೆಯು ಪಾಲಿಕೆಯ ಗಮನಕ್ಕೆ ತರದೆ ನರ್ಮ್ ನೆರವಿನಡಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣದಲ್ಲಿನ ಅಂಗಡಿ ಮಳಿಗೆಗಳನ್ನು ನೀಡಲು ಗ್ಲೋಬಲ್ ಟೆಂಡರ್‌ನ್ನು ಕರೆಯಲಾಗಿದೆಯೆಂದು ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರು ತಿಳಿಸಿದರು.<br>ನರ್ಮ್ ಯೋಜನೆಯಡಿ ಯಾವುದೇ ಟೆಂಡರ್‌ಗಳನ್ನು ಕರೆಯಬೇಕಾದಲ್ಲಿ ಇನ್ನು ಮುಂದೆ ನಗರಪಾಲಿಕೆಯ ಅನುಮತಿಯನ್ನು ಪಡೆಯುವಂತೆ ಜಿಲ್ಲಾಧಿಕಾರಿಗಳು ಹಾಗೂ ವಿಶೇಷಾಧಿಕಾರಿಗಳು ನರ್ಮ್ ಇವರು ಕ.ರಾ.ರ.ಸ.ನಿ. ಸಂಸ್ಥೆಗೆ ಆದೇಶಿಸಿದರು. | ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ ಇವರು ನವೆಂಬರ್ ಅಂತ್ಯದವರೆಗೆ ರೂ. **60.57** ಕೋಟಿ ಆರ್ಥಿಕ ಪ್ರಗತಿ ಸಾಧಿಸಬೇಕಾಗಿದ್ದು, ಇದರ ಎದುರಾಗಿ ರೂ. **61.00** ಕೋಟಿ ಆರ್ಥಿಕ ಪ್ರಗತಿ ಸಾಧಿಸಿರುವುದಾಗಿ ತಿಳಿಸಿದರು.<br>ಚಾಮುಂಡಿಬೆಟ್ಟದ ಕಾಮಗಾರಿಗೆ ಸಂಬಂಧಿಸಿದ **2**ನೇ ಹಂತದ ಅನುಮೋದನೆಯನ್ನು ಅರಣ್ಯ ಇಲಾಖೆಯಿಂದ ನಿರೀಕ್ಷಿಸುತ್ತಿರುವುದಾಗಿ ವಿಭಾಗೀಯ ನಿಯಾಂತ್ರಣಾಧಿಕಾರಿಗಳು ತಿಳಿಸಿದರು. ಸದರಿ ವಿಷಯವನ್ನು ಹಿಂಬಾಲಿಸಲು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಪಾಲಿಕೆ ಆಯುಕ್ತರು ಸೂಚಿಸಿದರು.<br>ಶ್ರೀ ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ ಇವರು ಕೆಳಕಂಡ ವಿಷಯಗಳ ಬಗ್ಗೆ ಸ್ಪಷ್ಟನೆ ಕೋರಿದರು.<br>**1)** **800** ಬಸ್ಸ್‌ಗಳನ್ನು ಖರೀದಿಸಲು ಅವಕಾಶವಿದ್ದು ಇದರ ಬದಲು **150** ಬಸ್ಸ್‌ಗಳನ್ನು ಮಾತ್ರ ಖರೀದಿಸಿರುವ ಬಗ್ಗೆ.<br>**2)** ವಾಣಿಜ್ಯ ಸಂಕೀರ್ಣದಲ್ಲಿ ಪಾಲಿಕೆ ಗಮನಕ್ಕೆ ತರದೆ ಅಂಗಡಿಗಳನ್ನು ನೀಡಲು ಗ್ಲೋಬಲ್ ಟೆಂಡರ್ ಕರೆದಿರುವ ಬಗ್ಗೆ.<br>**3)** ನಾಲ್ಕು ಹೊಸ ಸಂಖ್ಯೆ ಸೆಟಲೈಟ್ ಬಸ್ ನಿಲ್ದಾಣಗಳನ್ನು ನಿರ್ಮಿಸುವ ಜಾಗ ಹಾಗೂ ಅದರ ಮೊತ್ತದ ಬಗ್ಗೆ.<br>ಇದಕ್ಕೆ ಉತ್ತರವಾಗಿ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ ಇವರು ಪ್ರಸ್ತಾವನೆ ಸಲ್ಲಿಸಲಾಗಿದ್ದು, **150** ಬಸ್ಸ್‌ಗಳಿಗೆ ಹೆಚ್ಚುವರಿ **350** ಬಸ್ಸ್‌ಗಳಿಗೆ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ತಿಳಿಸಿದರು. ಗ್ಲೋಬಲ್ ಟೆಂಡರ್ ಬಗ್ಗೆ ಲಿಖಿತ | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ಉತ್ತರ ನೀಡುವಂತೆ ಇವರಿಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು ಇವರು ತಿಳಿಸಿದರು. ಸ್ಯಾಟಲೈಟ್ ಬಸ್ ನಿಲ್ದಾಣದ ಬಗ್ಗೆ ನಗರಪಾಲಿಕೆ ಆಯುಕ್ತರವರು, ನಗರಪಾಲಿಕೆ ವತಿಯಿಂದ ನಿರ್ಮಿಸಿ ಬಸ್ ನಿಲ್ದಾಣಗಳನ್ನು ಕೆ.ಎಸ್.ಆರ್.ಟಿ.ಸಿ ಇವರಿಗೆ ಹಸ್ತಾಂತರಿಸಲಾಗುವುದೆಂದು ತಿಳಿಸಿದರು. ಸದರಿ ವಿಷಯದ ಬಗ್ಗೆ ಕೌನ್ಸಿಲ್‌ನಲ್ಲಿ ಚರ್ಚಿಸಲಾಗುವುದೆಂದು ತಿಳಿಸಿದರು.<br>ಶ್ರೀ ಪಿ. ದೇವರಾಜು ನಗರಪಾಲಿಕೆ ಸದಸ್ಯರು ಮತ್ತು ಶ್ರೀ ಸಂದೇಶಸ್ವಾಮಿ ನಗರಪಾಲಿಕೆ ಸದಸ್ಯರು ಇವರುಗಳು ನರ್ಮ್ ಬಸ್‌ಗಳನ್ನು ಬಡಜನರ ಪ್ರದೇಶಕ್ಕೆ ವಿಸ್ತರಿಸಬೇಕೆಂದು ಸಲಹೆ ನೀಡಿದರು.<br><br>ಶ್ರೀ ಆಯೂಬ್‌ಖಾನ್ ಮಾಜಿ ಮಹಾಪೌರರು ಹಾಗೂ ನಗರಪಾಲಿಕೆ ಸದಸ್ಯರು ಇವರು ನಗರದ ಬಡ ಜನತೆಗೆ ಅನುಕೂಲಕ್ಕಾಗಿ ನರ್ಮ್ ಯೋಜನೆ ಇರುವುದರಿಂದ ಅವರ ಪ್ರದೇಶಗಳಿಗೂ ಕಡಿಮೆ ದರದಲ್ಲಿ ಬಸ್‌ಗಳು ಓಡಿಸಬೇಕೆಂದು ತಿಳಿಸಿದರು. ವಿಭಾಗೀಯ ನಿಯಂತ್ರಣಾಧಿಕಾರಿಗಳು ಕೆ.ಎಸ್.ಆರ್.ಟಿ.ಸಿ ಇವರು ಇದನ್ನು ಪರಿಶೀಲಿಸಲು ಸೂಚಿಸಲಾಯಿತು.<br>ಶ್ರೀ ಲಕ್ಷ್ಮಣ್, ಸಂಚಾಲಕರು ಎ.ಸಿ.ಐ.ಸಿ.ಎಂ ಇವರು ನಗರ ಪ್ರದೇಶಗಳ ಅನುಕೂಲಕ್ಕಾಗಿ ಚಿಕ್ಕ ಬಸ್‌ಗಳನ್ನು ಖರೀದಿಸಲು ಸಲಹೆ ನೀಡಿದರು. | |
| **6.** | **ಮೈಸೂರು ನಗರದ 20 ಆಯ್ದ ಕೊಳಚೆ ಪ್ರದೇಶಗಳ ಪುನರ್ ವಸತಿ ಯೋಜನೆ: ಅಂದಾಜು ವೆಚ್ಚ: ರೂ. 45.27 ಕೋಟಿಗಳು.**<br>ಹಂತ–**1**<br>ಮುಕ್ತಾಯವಾಗಬೇಕಾದುದು<br>Jan-2012 | ನಿಗಧಿ ಪಡಿಸಿದ ಗುರಿಯಂತೆ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಕಾರ್ಯಪಾಲಕ ಇಂಜಿನಿಯರ್ ಕೆ.ಎಸ್.ಸಿ.ಬಿ ಇವರು ತಿಳಿಸಿದರು.<br>ನರ್ಮ್ ಯೋಜನೆಯಡಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಿಸಲಾಗುತ್ತಿರುವ ಮನೆಗಳಿಗೆ ನೀರಿನ ಸಂಪರ್ಕ ತಲುಪಿಸಲು | ಕೊಳಚೆ ಪ್ರದೇಶದ ಮನೆಗಳಿಗೆ ನೀರು ಸರಬರಾಜು ಬಗ್ಗೆ ಇರುವ ವಿವರಗಳ ಪ್ರತಿಗಳನ್ನು ಶ್ರೀ ಲಕ್ಷ್ಮಣ್, ಸಂಚಾಲಕರು ಎ.ಸಿ.ಐ.ಸಿ.ಎಂ ಇವರಿಗೆ ನೀಡಲಾಯಿತು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಕೈಗೊಂಡಿರುವ ಕ್ರಮಗಳ ಬಗ್ಗೆ ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರು ಸಭೆಯಲ್ಲಿ ಚರ್ಚಿಸಿದರು. ಈ ಬಗ್ಗೆ ವಿವರವಾದ ಮಾಹಿತಿಯನ್ನು ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರಿಗೆ ನೀಡುವಂತೆ ಕಾರ್ಯಪಾಲಕ ಇಂಜಿನಿಯರ್ ಕೆ.ಎಸ್.ಸಿ.ಬಿ ಇವರಿಗೆ ಸೂಚಿಸಲಾಯಿತು. | | |
| 7. | 1.ಮೈಸೂರು–ಬೆಂಗಳೂರು ರಸ್ತೆಯಿಂದ ಮೈಸೂರು–ನಂಜನಗೂಡುವರೆಗೆ 2 ಪಥದ ಹೊರ ವರ್ತುಲದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0+0.25 ಕಿ.ಮಿ ಪಶ್ಚಿಮದ ಕಡೆಗೆ) 2. ಮೈಸೂರು–ಬೆಂಗಳೂರು ಹೊರ ವರ್ತುಲ ರಸ್ತೆಯಿಂದ– ಮೈಸೂರು ಬನ್ನೂರು ರಸ್ತೆವರೆಗೆ 4 ಪಥದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0 ಯಿಂದ 7.49ಕಿ.ಮಿ ಪೂರ್ವದ ಕಡೆಗೆ)<br>ಅಂದಾಜು ವೆಚ್ಚ: ರೂ. 219.03 ಕೋಟಿಗಳು. ಅನುಮೋದಿಸಿದ ದಿ:15.02.08 | ಸದರಿ ಯೋಜನೆಗೆ ತಯಾರಿಸಿರುವ ಅಂದಾಜು ಪಟ್ಟಿಯಲ್ಲಿ ಕೆಲವೊಂದು ತಾಂತ್ರಿಕ ನ್ಯೂನತೆಗಳನ್ನು ಅಧೀಕ್ಷಕ ಇಂಜಿನಿಯರ್ ಮುಡಾ ಇವರು ಗಮನಿಸಿರುವುದಾಗಿ ಆಯುಕ್ತರು ಮುಡಾ ಇವರು ತಿಳಿಸಿದರು. ಈ ಬಗ್ಗೆ ನಾಲ್ಕು ಅಭಿಯಂತರುಗಳನ್ನು ಒಳಗೊಂಡಿರುವ ತಂಡವನ್ನು ರಚಿಸಲಾಗಿದ್ದು, ಅವರು ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಸರಿಪಡಿಸಲಾಗಿದ್ದು, ಇನ್ನು ಎರಡು ದಿನಗಳೊಳಗೆ ಟೆಂಡರ್‌ಗಳನ್ನು ಕರೆಯಲಾಗುವುದೆಂದು ತಿಳಿಸಿದರು.<br><br>ವರ್ತುಲ ರಸ್ತೆ ಕಾಮಗಾರಿ ಪೂರ್ಣಗೊಂಡ ನಂತರದ ನಿರ್ವಹಣಾ ಅವಧಿಯನ್ನು ಒಂದು ವರ್ಷದಿಂದ ಮೂರು ವರ್ಷದವರೆಗೆ ಹೆಚ್ಚಿಸಿರುವುದಾಗಿ ಜಿಲ್ಲಾಧಿಕಾರಿಗಳು ಹಾಗೂ ವಿಶೇಷಾಧಿಕಾರಿಗಳು ನರ್ಮ್ ಇವರು ತಿಳಿಸಿದರು. | ಆಯುಕ್ತರು, ಮೂಡಾ ಇವರು ಇ–ಪ್ರೊಕ್ಯೂರ್‌ಮೆಂಟ್ ಸಿಸ್ಟಮ್ ಪ್ರಕಾರ ಟೆಂಡರ್ ಕರೆದಿದ್ದು, ದಿನಾಂಕ: 24.12.2009 ರಂದು ಟೆಂಡರ್‌ಗೆ ಕೊನೆಯ ದಿನವಾಗಿ ನಿಗಧಿಪಡಿಸಲಾಗಿದೆಯೆಂದು ತಿಳಿಸಿದರು. ಈ ತಿಂಗಳ ಅಂತ್ಯದಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಕಾಮಗಾರಿ ಪ್ರಾರಂಭಿಸಲಾಗುವುದೆಂದು ತಿಳಿಸಿದರು. ಕಾಮಗಾರಿ ಅವಧಿಯನ್ನು 10 ತಿಂಗಳಿಗೆ ಕಡಿಮೆಗೊಳಿಸಲಾಗಿದ್ದು, ನವೆಂಬರ್ 2010ರ ಒಳಗೆ ಪೂರ್ಣಗೊಳಿಸುವುದಾಗಿ ತಿಳಿಸಿದರು.<br>ಅಧೀಕ್ಷಕ ಇಂಜಿನಿಯರ್, ಮೂಡಾ ಇವರು ಇ–ಪ್ರೊಕ್ಯೂರ್‌ಮೆಂಟ್ ಸಿಸ್ಟಮ್ ಬಗ್ಗೆ ಸಭೆಗೆ ವಿವರ ನೀಡಿದರು. | |
| 8. | ದೊಡ್ಡ ಮಳೆನೀರು ಚರಂಡಿ ಪುನರ್ ನಿರ್ಮಾಣ<br>ಅಂದಾಜು ಮೊತ್ತ: ರೂ 384.60 ಕೋಟಿಗಳು (ಸದ್ಯಕ್ಕೆ ರೂ 125.00 ಕೋಟಿಗೆ ಮಿತಿಗೊಳಿಸಲಾಗಿದೆ)<br>ಮುಕ್ತಾಯವಾಗಬೇಕಾದುದು<br>ಡಿಸೆಂಬರ್ 2011. | ದೊಡ್ಡ ಮಳೆನೀರು ಚರಂಡಿಗಳನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗುತ್ತಿದೆ–ಯೆಂದು ಹಾಗೂ ಮಳೆಯ ನೀರು ಇಂಗಲು ಯಾವುದೇ ಅವಕಾಶ ಕಲ್ಪಿಸಿರುವುದಿಲ್ಲವೆಂದು ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರು ತಿಳಿಸಿದರು. ಮಳೆ ನೀರನ್ನು ಇಂಗಿಸಲು ಅವಶ್ಯಕ ಸ್ಥಳಗಳಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೆಂದು ಅಧೀಕ್ಷಕ ಅಭಿಯಂತರರು, ನರ್ಮ್ ಇವರು | ಶ್ರೀ ಶ್ರೀಕಂಠಯ್ಯ, ನಗರಪಾಲಿಕೆ ಸದಸ್ಯರು ಇವರು ದಿನಪತ್ರಿಕೆಯಲ್ಲಿ ವರದಿಯಾದಂತೆ ಕ್ವಾರಿಗ್ರಿಟನ್ನು ಉಪಯೋಗಿಸುವ ಬಗ್ಗೆ ವಿವರ ಕೇಳಿದರು. ಈ ಬಗ್ಗೆ ಅಧೀಕ್ಷಕ ಇಂಜಿನಿಯರ್, ನರ್ಮ್ ಇವರು ಮಾದರಿಯನ್ನು ಕೆ.ಇ.ಆರ್.ಎಸ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು ಇದರ ತಾಂತ್ರಿಕ ವರದಿಯನ್ನು ನಿರೀಕ್ಷಿಸಲಾಗಿದೆಯೆಂದು ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ತಿಳಿಸಿದರು. | ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು ದೊಡ್ಡ ಮಳೆ ಚರಂಡಿ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ನಡೆಸುವ ಬಗ್ಗೆ ಸೂಚಿಸಿದರು. | |
| 9. | ಘನತ್ಯಾಜ್ಯ ವಸ್ತು ನಿರ್ವಹಣೆ: ಮೈಸೂರು ನಗರದಲ್ಲಿ ಸಮಗ್ರ ಮುನ್ಸಿಪಲ್ ಸಾಲಿಡ್ ವೇಸ್ಟ್ ಮ್ಯಾನೆಜ್‌ಮೆಂಟ್ ಪ್ಲಾಂಟ್ ಅಭಿವೃದ್ಧಿ ಪಡಿಸಿವುದು. ಅನುಮೋದಿತ ದಿ: 19-12-2008<br>ಯೋಜನೆಯ ಮೊತ್ತ ರೂ. 29.98 ಕೋಟಿ<br>ಮುಕ್ತಾಯವಾಗಬೇಕಾದುದು ಜೂನ್ 2010. | ಒಟ್ಟು 168 ಆಟೋ ಟಿಪ್ಪರ್‌ಗಳಲ್ಲಿ ಈಗಾಗಲೇ 46 ಆಟೋ ಟಿಪ್ಪರ್‌ಗಳನ್ನು ಖರಿದಿಸಲಾಗೆದೆಯೆಂದು ಅಧೀಕ್ಷಕ ಅಭಿಯಂತರರು, ನರ್ಮ್ ಇವರು ತಿಳಿಸಿದರು. | ಅಧೀಕ್ಷಕ ಇಂಜಿನಿಯರ್, ನರ್ಮ್ ಇವರು ಈ ಬಗ್ಗೆ 2 ಕ್ಯಾಂಪಕ್ಟರ್ಸ್ ಮತ್ತು 5 ಡಂಪರ್ ಪ್ಲೇಸರ್ಸ್‌ಗಳನ್ನು ಖರೀದಿಸಲಾಗಿದೆಯೆಂದು ತಿಳಿಸಿದರು. | |
| 10. | ಮೈಸೂರು ನಗರದ ಪಾರಂಪರಿಕ ಕಟ್ಟಡಗಳು ಹಾಗೂ ವೃತ್ತಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | ಚರ್ಚೆಯಾಗಿರುವುದಿಲ್ಲ. | - | |
| 11. | ಇ.ಡಬ್ಲ್ಯೂ.ಎಸ್. ಮನೆಗಳು ಮತ್ತು ಮೂಲಭೂತ ಅಭಿವೃದ್ಧಿ ಪ್ರಾಧಿಕಾರ ಲಿಮೆಟೆಡ್. ಬಿ.ಎಸ್.ಯು.ಪಿ. ಅಡಿಯಲ್ಲಿ<br>ಯೋಜನೆಯ ಮೊತ್ತ ರೂ. 52.35 ಕೋಟಿ<br>ಮುಕ್ತಾಯವಾಗಬೇಕಾದ ದಿನಾಂಕ: | ಚರ್ಚೆಯಾಗಿರುವುದಿಲ್ಲ. | ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು 4305 ಮನೆಗಳಲ್ಲಿ 2499 ಉಳಿಕೆ ಮನೆಗಳ ನಿರ್ಮಾಣಕ್ಕೆ ಯೋಜನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆಯೆಂದು ತಿಳಿಸಿದರು. ಈ ಬಗ್ಗೆ ಹುಡ್ಕೋದವರು ಕೆಲವು ವಿವರ ಕೇಳಿದ್ದು ಅದನ್ನು ಒದಗಿಸಿ ಭಾರತ ಸರ್ಕಾರದ ಮಟ್ಟದಲ್ಲಿ ವ್ಯವಹರಿಸಲಾಗುವುದೆಂದು ತಿಳಿಸಿದರು. | |

**<u>ಸಾಮನ್ಯ ಚರ್ಚೆ:</u>**

- ಶ್ರೀ ಪದ್ಮನಾಭ್ ಡಿ, ಛೇರ್‌ಮೆನ್, ಜಿಲ್ಲಾ ಪ್ಲಾನಿಂಗ್ ಕಮಿಟಿ, ಇವರು ಪೂಜ್ಯ ಮಹಾಪೌರರು ಹಾಗೂ ಪಾಲಿಕೆ ಸದಸ್ಯರುಗಳಿಂದ ನರ್ಮ್ ಕಾಮಗಾರಿಗಳ ಪರಿವೀಕ್ಷಣೆಗಾಗಿ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೋರಿದರು. ಕಾಮಗಾರಿಗಳ ಪರಿವೀಕ್ಷಣೆಯನ್ನು ಮೇಯರ್ ಹಾಗೂ ಪಾಲಿಕೆ ಸದಸ್ಯರೊಡನೆ ದಿನಾಂಕ: 07.12.2009 ರಂದು ನಡೆಸಲು ನಿರ್ಧರಿಸಲಾಯಿತು. ಮಾನ್ಯ ಮಹಾಪೌರರೊಡನೆ ಚರ್ಚಿಸಿ ಈ ಬಗ್ಗೆ ಕ್ರಮ ಕೈಗೊಳ್ಳಲು ಅಧೀಕ್ಷಕ ಇಂಜಿನಿಯರ್, ನರ್ಮ್ ಇವರಿಗೆ ಸೂಚಿಸಲಾಯಿತು.

- ಶ್ರೀ ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ ಇವರು ಜಸ್ಕೋದವರೊಡನೆ ಈವರೆಗೆ ಯಾವುದೇ ಪ್ರತ್ಯೇಕ ಸಭೆಯನ್ನು ನಡೆಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ಉತ್ತರವಾಗಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು ಶೀಘ್ರವಾಗಿ ಸಭೆ ನಡೆಸಲು ತಿಳಿಸಿದರು.

- ಶ್ರೀ ಕೆ.ವಿ. ಮಲ್ಲೇಶ್, ನಗರಪಾಲಿಕೆ ಸದಸ್ಯರು, ಮೈನಪಾ ಇವರು ಸಿ.ಪಿ.ಎಫ್ ಪ್ರಾಜೆಕ್ಟ್‌ಗಳ ಹಂತದ ಬಗ್ಗೆ ವಿವರ ಕೋರಿದರು. ಇದಕ್ಕೆ ಉತ್ತರವಾಗಿ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು 105 ಪ್ರಾಜೆಕ್ಟ್‌ಗಳನ್ನು ಭಾರತ ಸರ್ಕಾರಕ್ಕೆ ಸಲ್ಲಿಸಿದ್ದು ಇದರಲ್ಲಿ 33 ಪ್ರಾಜೆಕ್ಟ್‌ಗಳು ಪರೀಕ್ಷಿಸಲಾಗಿದ್ದು ಉಳಿಕೆ ಪ್ರಾಜೆಕ್ಟ್‌ಗಳನ್ನು ಪರಿಶೀಲನೆ ಮಾಡಲಾಗುತ್ತಿದೆಯೆಂದು ತಿಳಿಸಿದರು. ಈ ಬಗ್ಗೆ ದಿನಾಂಕ: 04.12.2009ರಂದು ದೆಹಲಿಯಲ್ಲಿ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮಾಡುವುದಾಗಿ ತಿಳಿಸಿ, ಉಳಿದಿರುವ ಪ್ರಾಜೆಕ್ಟ್‌ಗಳನ್ನು ಮಂಜೂರು ಮಾಡುವ ಬಗ್ಗೆ ಒತ್ತಾಯಿಸಲಾಗುವುದೆಂದು ತಿಳಿಸಿದರು.

- ಆಂಕರ್ ಎನ್.ಜಿ.ಒ ರಚನೆಯನ್ನು ನಿರೀಕ್ಷಿಸಿ, ತಾತ್ಕಾಲಿಕ ತಾಂತ್ರಿಕ ಸಮಿತಿಯನ್ನು ರಚಿಸಲು ನಿರ್ಧರಿಸಲಾಯಿತು. ಈ ಬಗ್ಗೆ ಹೆಚ್.ಆರ್.ಡಿ.ಒ, ನರ್ಮ್ ಇವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.

ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು
ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ
ಮೈಸೂರು.

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ :

1. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಸಚಿವರ ಗಮನಕ್ಕೆ ತರುವಂತೆ ಕೋರಿದೆ.
2. ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹಾಗೂ ವಿದಾನಸಭೆಯ ಸದಸ್ಯರು, ಕೃಷ್ಣರಾಜ ಕ್ಷೇತ್ರ, ಮೈಸೂರು.
3. ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ, ಮೈಸೂರು.
4. ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು.
5. ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ ಕ್ಷೇತ್ರ, ಮೈಸೂರು.
6. ಮಾನ್ಯ, ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು.
7. ಶ್ರೀ ಡಿ. ಪದ್ಮನಾಭ, ಅಧ್ಯಕ್ಷರು, ಛೇರ್‌ಮೆನ್, ಜಿಲ್ಲಾ ಪ್ಲಾನಿಂಗ್ ಕಮಿಟಿ, ಮೈಸೂರು.
8. ಶ್ರೀ ಹೆಚ್.ಎನ್.ಶ್ರೀಕಂಠಯ್ಯ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
9. ಶ್ರೀ ಬಿ.ಎಲ್.ಭೈರಪ್ಪ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
10. ಶ್ರೀ ಎಂ.ಜಯಶಂಕರಸ್ವಾಮಿ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ಮೈಸೂರು.
11. ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ, ಮೈಸೂರು.
12. ಮಾನ್ಯ ಉಪ ಮಹಾ ಪೌರರು, ಮೈಸೂರು ನಗರಪಾಲಿಕೆ, ಮೈಸೂರು.
13. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
14. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
15. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
16. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಸಿಲ್ವರ್ ಜ್ಯುಬಲಿ ಬ್ಲಾಕ್, 2ನೇ ಮಹಡಿ, Unity ಕಟ್ಟಡ, 3ನೇ ಅಡ್ಡರಸ್ತೆ, ಮಿಷನ್ ರಸ್ತೆ, ಬೆಂಗಳೂರು.
17. ವ್ಯವಸ್ಥಾಪಕ ನಿರ್ದೇಶಕರು, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಂ. 6, ಜಲಭವನ, 1ನೇ ಹಂತ, 1ನೇ ಸ್ಟೇಜ್, ಬಿ.ಟಿ.ಎಂ. ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029.
18. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿ., ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆ, ಶಾಂತಿನಗರ, ಬೆಂಗಳೂರು.
19. ಆಯುಕ್ತರು, ಪಾರಾಂಪರಿಕ ಇಲಾಖೆ, ಅರ್ಕ್ಯಾಲಜಿ ಮ್ಯೂಸಿಯಂ ಮತ್ತು ಪಾರಂಪರಿಕ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್ಬಾ ರಸ್ತೆ, ಬೆಂಗಳೂರು.19.
20. ಆಯುಕ್ತರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,ಬೆಂಗಳೂರು – 1.

II ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1. ಆಯುಕ್ತರು, ಮೈಸೂರು ನಗರಪಾಲಿಕೆ, ಮೈಸೂರು.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
3. ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ, ಶೇಷಾದ್ರಿಪುರಂ, ಬೆಂಗಳೂರು.
4. ಉಪ ವಿಭಾಗಾಧಿಕಾರಿಗಳು, ಮೈಸೂರು.
5. ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಪಾಲಿಕೆ, ಮೈಸೂರು.
6. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿ., ಮೈಸೂರು.
7. ಕಾರ್ಯಪಾಲಕ ಇಂಜಿನಿಯರ್, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಗರವಿಭಾಗ (ಜೆಎನ್ ನರ್ಮ್) ಯಾದವಗಿರಿ, ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮೈಸೂರು.
9. ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ನಿ.,, ಮೈಸೂರು ಗ್ರಾಮಾಂತರ ವಿಭಾಗ, ಬನ್ನಿಮಂಟಪ, ಮೈಸೂರು.
10. ಉಪ ನಿರ್ದೇಶಕರು, ಪಾರಂಪರಿಕ ಇಲಾಖೆ, ಮೈಸೂರು.
11. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.

ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು
ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ
ಮೈಸೂರು.